ಇದರ ನಡುವೆ ಕಾವಿಗೆ ಕೂತ ಜೋರ್ಡಾನ್ ಬಝಾ ಎಂಬ ಹದ್ದು ಜಾತಿಗೆ ಸೇರಿದ ಹಕ್ಕಿ ಸಿಕ್ಕಿತು. ಅದು ಸಾವಕಾಶವಾಗಿ ಮೈ ಕೈ ಕೆರೆದುಕೊಳ್ಳುತ್ತಾ ಎತ್ತರದ ಮರದ ಮೇಲೆ ಕೂತಿತ್ತು. ಹೀಗೆ ರಿಲ್ಯಾಕ್ಸ್ ಮೂಡಿನಲ್ಲಿ ಕೂರುವ ಹಕ್ಕಿಗಳು ತಕ್ಷಣಕ್ಕೆ ಕೂತಲ್ಲಿಂದ ಮೇಲೇಳುವುದು ಕಡಿಮೆ. ತುಂಬಾ ಹೊತ್ತು ನೋಡಿ ಒಂದಷ್ಟು ಚಿತ್ರ ತೆಗೆದು ಮುಂದೆ ಹೊರಟೆವು. ಸುಂದರ ಬೆಟ್ಟದ ತುದಿಗೆ ನಮ್ಮನ್ನು ರಂತು ಕರೆದುಕೊಂಡು ಹೋದ. ನಿಜಕ್ಕೂ ಅದು ಸ್ವರ್ಗಕ್ಕೆ ಸಮಾನವಾಗಿತ್ತು. ಅದು ಒಬ್ಬರ ಖಾಸಗಿ ಟೀ ತೋಟ. ಒಂದು ಕಡೆ ಕ್ಯಾಮೆರಾ ಕೀಲಿಸಿಕೊಂಡು ನಿಲ್ಲಲು ಹೇಳಿ ಆತ ಆ ಪಕ್ಷಿಯ ದನಿಯನ್ನು ನುಡಿಸಿದ. ಒಂದೆರಡು ಗಂಟೆಯಾದರೂ ಯಾವ ಪ್ರತಿ ಉತ್ತರವೇ ಇಲ್ಲ. ಪ್ರಕೃತಿಯ ಸೌಂದರ್ಯ ನೋಡುತ್ತಾ, ಆಗಾಗ ಬರುವ ಜಡಿ ಮಳೆಯಿಂದ ಕ್ಯಾಮೆರಾ ಪ್ರಾಣ ರಕ್ಷಿಸಿಕೊಳ್ಳುತ್ತಾ ಕಾಲ ಹಾಕಿದೆವು. ಯಾವ ಪಕ್ಷಿ ಸಿಗದಿದ್ದರೂ ಚಿಂತೆಯಿಲ್ಲ ಎಂಬಂತಿತ್ತು ಆ ಸ್ಥಳ. ಸಂಜೆಯ ಹೊತ್ತಿಗೆ ನಮ್ಮ ಕುಕ್ಕು ಹಾಡುತ್ತಾ ಬಂದಿತು.

ಕುಕ್ಕು ಎಂಬ ಹಕ್ಕಿ ನೋಡಿದರೆ ನೀವು ಚಕಿತರಾಗುತ್ತಿರಿ. ಅಷ್ಟು ಸುಂದರ ಪಕ್ಷಿ ಹಲವಾರು ಬಗೆಯ ಬಣ್ಣದ ಕುಕ್ಕುಗಳು ಇದ್ದಾವೆ. ಇಷ್ಟು ಚಲುವ ಈ ಖಗ ತನ್ನ ಗೂಡು ಕಟ್ಟಿ ಮೊಟ್ಟೆ ಇಟ್ಟು ಮರಿ ಮಾಡುವ ವಿಚಾರದಲ್ಲಿ ಮಾತ್ರ ಕೋಗಿಲೆಯ ಬುದ್ಧಿ. ಮೊಟ್ಟೆಯನ್ನುಉಪಾಯವಾಗಿ ಬೇರೆ ಪಕ್ಷಿ ಗೂಡಿನಲ್ಲಿ ಕದ್ದಿಟ್ಟು ಓಡುತ್ತದೆ. ಆಮೇಲೆ ತಾನಿಟ್ಟ ಮೊಟ್ಟೆ ಕಥೆ ಏನಾಯಿತು? ಮರಿಗಳು ಬದುಕಿದವೋ? ಸತ್ತವೋ? ಎಂದು ಹಿಂತಿರುಗಿಯೂ ನೋಡುವುದಿಲ್ಲ.

ಕುಕ್ಕುವಿನ ಮರಿ ಎಂಥ ಐನಾತಿ ಎಂದರೆ ನೀವು ಕೂಡ ನಂಬುವುದಿಲ್ಲ. ಅನ್ಯರ ಗೂಡಿನಲ್ಲಿ ಅರಳುವ ಕುಕ್ಕು ಮರಿ ಕಣ್ಣು ಕೂಡ ಬಿಡಲಾಗದ ಸ್ಥಿತಿಯಲ್ಲಿ ಇರುವಾಗಲೇ ತನಗಾಶ್ರಯ ಕೊಟ್ಟ ಹಕ್ಕಿ ಗೂಡಿನ ಮರಿಗಳನ್ನು ಕೆಡುಹಿ ಸಾಯಿಸುತ್ತದೆ. ಊಟ ಹುಡುಕಿ ತರಲು ಪೋಷಕ ಹಕ್ಕಿಗಳು ಹೊರಗೆ ಹೋದ ಸಮಯವನ್ನೇ ಕಾದಿದ್ದು ತನ್ನ ಬೆನ್ನನ್ನು ಬಳಸಿ ಮೂಲ ನಿವಾಸಿ ಮರಿಗಳನ್ನು ಒಂದೊಂದಾಗಿ ಗೂಡಿನಿಂದ ಕೆಳಗೆ ತಳ್ಳುತ್ತದೆ. ಮರಿಗಳ ಜೊತೆ ಮೊಟ್ಟೆಗಳಿದ್ದರೂ ಅದನ್ನು ಎತ್ತರದಿಂದ ಕೆಡವಿ ನಾಶ ನಾಶಪಡಿಸುತ್ತದೆ.



ಕೊನೆಗೆ ಆ ಗೂಡಿಗೆ ತಾನು ವಾರಸುದಾರನಾಗಿ ಉಳಿಯುತ್ತದೆ. ಪ್ರಕೃತಿ ಈ ದುರ್ಬುದ್ಧಿಯನ್ನು ಕುಕ್ಕು ಹಕ್ಕಿಗೆ ಯಾಕೆ ಕೊಟ್ಟಿದೆಯೋ ಗೊತ್ತಿಲ್ಲ.

ಪೋಷಕ ಹಕ್ಕಿಗಳೆಷ್ಟು ಪೆದ್ದು ಎಂದರೆ ತಮ್ಮ ಮರಿ ಮತ್ತು ಮೊಟ್ಟೆಗಳು ಹೀಗೆ ಆಚಾನಕ್ಕಾಗಿ ಕಣ್ಮರೆಯಾದ ಬಗ್ಗೆ ಸ್ವಲ್ಪವೂ ತಲೆಕೆಡಿಸಿಕೊಳ್ಳುವುದಿಲ್ಲ. ಅನುಮಾನವೂ ಬರುವುದಿಲ್ಲ. ಉಳಿದ ಏಕೈಕ ಕಂದ ಎಂದು ಕುಕ್ಕುವನ್ನೇ ತಮ್ಮ ಸ್ವಂತ ಮರಿ ಎಂದು ಭಾವಿಸುತ್ತವೆ. ಕಷ್ಟಪಟ್ಟು ಸಾಕುತ್ತವೆ. ಬಕಾಸುರನಂತೆ ನುಂಗುವ ಕುಕ್ಕುಗೆ ನಿರಂತರ ಆಹಾರ ಹೆಕ್ಕಿ ತಂದು ಕೊಡುವುದು ಸುಲಭದ ಮಾತಲ್ಲ. ಪೋಷಕ ತಂದೆ ತಾಯಿ ಪಕ್ಷಿಗಳಿಗಿಂತ ಮೂರು ನಾಲ್ಕು ಪಟ್ಟು ದೊಡ್ಡದಾಗಿ ಬೆಳೆಯುವ ಕುಕ್ಕು ಅಚ್ಚರಿ ಹುಟ್ಟಿಸುತ್ತದೆ. ಒಂದು ಸಲವಾದರೂ ಇದು ನಮ್ಮ ಮಗು ಅಲ್ಲವಲ್ಲ ಎಂಬ ಸಣ್ಣಗುಮಾನಿಯು ಆ ಮುಗ್ಧ ಪೋಷಕ ಪಕ್ಷಿಗಳಿಗೆ ಬರುವುದಿಲ್ಲ. ನಿರಂತರವಾಗಿ ಆಹಾರವನ್ನು ಹುಡುಕಿ ತಂದು ಕುಕ್ಕುಮರಿಯ ಬಾಯಿಗೆ ಸುರಿಯುತ್ತಲೇ ಇರುತ್ತವೆ. ಇಂತಹ ನೂರಾರು ವಿಸ್ಮಯಗಳು ಪಕ್ಷಿ ಪ್ರಪಂಚದಲ್ಲಿ ನಡೆಯುತ್ತಲೇ ಇರುತ್ತವೆ. ●